ದೂರದಲ್ಲಿ ಶ್ರೀಮತಿ ಹಚಿನ್ಸನ್ ಅವಸವಸರದಿಂದ ಓಡಿ ಬರುತ್ತಿರುವುದು ಅವರಿಗೆ ಕಾಣಿಸಿತು. ಏದುಸಿರು ಬಿಡುತ್ತಾ ಅವಳು ಜನಸಂದಣಿಯನ್ನು ಸೇರಿಕೊಳ್ಳುತ್ತಾ ತನ್ನ ಪಕ್ಕದಲ್ಲಿದ್ದ ಮಿಸೆಸ್ ಡೆಲಾಕ್ರೂಜಳಿಗೆ, "ನನಗೆ ಮರೆತೇ ಹೋಗಿತ್ತು ಮಾರಾಯ್ತಿ!" ಎಂದಳು. ಅವರಿಬ್ಬರೂ ಮೆಲ್ಲಗೆ ನಕ್ಕರು.

"ನಮ್ಮನೆಯವರು ಹಿತ್ತಲಿನಲ್ಲಿ ಸೌದೆ ಒಟ್ಟುತ್ತಾ ಇದ್ದಾರೆಂದೇ ತಿಳಿದುಕೊಂಡಿದ್ದೆ. ಯಾಕೋ ಕಿಟಕಿಯಿಂದ ಹೊರಗೆ ನೋಡ್ತೀನಿ, ಸ್ವಲ್ಪ ಹೊತ್ತಿನ ಹಿಂದೆ ರಸ್ತೆಯಲ್ಲಿ ಆಟ ಆಡ್ತಾ ಇದ್ದ ಮಕ್ಕಳು ಒಬ್ಬರೂ ಕಾಣಿಸ್ತ ಇಲ್ಲ! ತಕ್ಷಣ ಇವತ್ತು ಇಪ್ಪತ್ತೇಳನೇ ತಾರೀಖು ಅಂತ ತಲೆಗೆ ಹೊಳೀತು! ಗೊತ್ತಾಗುತ್ತಲೇ ಎಲ್ಲಾ ಬಿಟ್ಟು ಓಡುತ್ತಾ ಬಂದೆ." ಎಂದು ಏಪ್ರನಿಗೆ ಕೈ ಒರೆಸುತ್ತಾ ಹೇಳಿದಳು.

"ಪರವಾ ಇಲ್ಲ ಬಿಡೆ. ಇನ್ನೂ ಶುರು ಆಗಿಲ್ಲ." ಶ್ರೀಮತಿ ಡೆಲಾಕ್ರೂಜ್ ಹೇಳಿದಳು.

ಶ್ರೀಮತಿ ಹಚಿನ್ಸನ್ ಕತ್ತನ್ನೆತ್ತುತ್ತಾ ತನ್ನ ಗಂಡ, ಮಕ್ಕಳು ಎಲ್ಲಿದ್ದಾರೆಂದು ಸುತ್ತ ದೃಷ್ಟಿ ಹಾಯಿಸಿದಳು. ಅವರು ಮುಂದಿನ ಮೊದಲ ಸಾಲಿನಲ್ಲೇ ನಿಂತಿರುವುದು ಅವಳಿಗೆ ಕಾಣಿಸಿತು. ಡೆಲಾಕ್ರೂಜಳ ಭುಜವನ್ನು ತಟ್ಟುತ್ತಾ ತಾನು ಮುಂದೆ ಹೋಗುವುದಾಗಿ ಕೈಸನ್ನೆ ಮಾಡಿದಳು. ಮುಂದೆ ನಿಂತಿದ್ದವರು ಅವಳಿಗೆ ದಾರಿ ಮಾಡಿಕೊಟ್ಟರು.

"ಬಿಲ್, ಕೊನೆಗೂ ನಿನ್ನ ಹೆಂಡತಿ ಬಂದಳು ಕಣಪ್ಪ." ಯಾರೋ ಹಿಂದಿನಿಂದ ಹಚಿನ್ಸನ್ನನಿಗೆ ಕೇಳಿಸುವಂತೆ ಸುದ್ದಿ ಮುಟ್ಟಿಸಿದರು. ಶ್ರೀಮತಿ ಟೆಸ್ಸಿ ಹಚಿನ್ಸನ್ ಮುಂದಿನ ಸಾಲಿನಲ್ಲಿ ನಿಂತಿದ್ದ ತನ್ನ ಗಂಡ ಮತ್ತು ಮಕ್ಕಳನ್ನು ಸೇರಿಕೊಂಡಳು. ಅವಳಿಗಾಗಿಯೇ ಕಾದು ನಿಂತಿರುವಂತೆ ಮಿಸ್ಟರ್ ಸಮ್ಮರ್ಸ್ ಹೇಳಿದರು: "ನೀನು ಇಲ್ಲದೆಯೇ ಶುರು ಮಾಡಬೇಕೇನೋ ಅಂತ ಅಂದ್ಕೊಂಡಿದ್ದೆ ಟೆಸ್ಸಿ!"

"ಏನು ಮಾಡೋದು ಜ್ಯೋ? ಮನೆ ಕೆಲಸದಲ್ಲಿ ಮರೆತೇ ಹೋಗಿದ್ದೆ!" ಅವಳು ನಗುತ್ತಾ ಉತ್ತರಿಸಿದಳು.

"ಸರಿ ಹಾಗಾದರೆ, "ಮಿಸ್ಟರ್ ಸಮ್ಮರ್ಸ್ ಜನರನ್ನುದ್ದೇಶಿಸಿ ಹೇಳಿದ, "ಶುರು ಮಾಡೋಣವೇ? ಎಲ್ಲರೂ ಹಾಜರಿದ್ದಾರಲ್ಲವೇ? ಮತ್ಯಾರೂ ತಪ್ಪಿಸಿಕೊಂಡಿಲ್ಲ ತಾನೆ?"

"ಡೇನಿಯಲ್!.. ಡೇನಿಯಲ್ ಕಾಣಿಸ್ತಾ ಇಲ್ಲ..." ಬಹಳಷ್ಟು ಜನ ಒಟ್ಟಿಗೇ ಉಲಿದರು.

ಮಿಸ್ಟರ್ ಸಮ್ಮರ್ಸ್ ತಮ್ಮ ಬಳಿ ಇದ್ದ ಪಟ್ಟಿಯ ಮೇಲೆ ಕಣ್ಣು ಹಾಯಿಸಿದರು. "ಹೌದು. ಕ್ಲೈಡ್ ಡೇನಿಯಲ್ಸ್. ಅವನ ಕಾಲು ತುಂಡಾಗಿದೆ. ಅವನ ಪರವಾಗಿ ಯಾರು ಲಾಟರಿ ಎತ್ತುತ್ತಾರೆ?"

"ನಾನು." ಸ್ತ್ರೀಯೊಬ್ಬಳು ಕೈ ಎತ್ತಿದಳು. ಮಿಸ್ಟರ್ ಸಮ್ಮರ್ಸ್ ಅವಳೆಡೆಗೊಮ್ಮೆ ನೋಡಿದ.

"ಒಹ್, ಡೇನಿಯಲ್ಸನ ಹೆಂಡತಿ! ಯಾಕಮ್ಮ ಜೇನಿ, ನಿನಗೆ ಬೆಳೆದ ಮಗನಿರಬೇಕಲ್ಲ?"

"ಅವನಿಗಿನ್ನೂ ಹದಿನಾರು ತುಂಬಿಲ್ಲ ಮಿ. ಸಮ್ಮರ್ಸ್." ಈ ವಿಚಾರ ಸಮ್ಮರ್ಸ್‌ಗಷ್ಟೇ ಅಲ್ಲದೆ ಊರಿಗವರಿಗೆಲ್ಲಾ ಗೊತ್ತಿತ್ತು. ಆದರೂ ಕೇಳುವುದು ಶಿಷ್ಟಾಚಾರವಾಗಿತ್ತು.

"ಸರಿ. ಈಗ ವ್ಯಾಟ್ಸನನ ಮಗ ಎಲ್ಲಿ?"

ಆಗಷ್ಟೇ ಚಿಗುರು ಮೀಸೆ ಮೊಳಕೆಯೊಡೆಯುತ್ತಿದ್ದ ಹುಡುಗನೊಬ್ಬ ಜನರ ಮಧ್ಯದಿಂದ ಕೈ ಎತ್ತಿದ. "ಈ ವರ್ಷದಿಂದ ಅವ್ವನ ಬದಲಿಗೆ ನಾನು ಲಾಟರಿ ಎತ್ತುತ್ತೇನೆ..." ಅವನ ದನಿಯಲ್ಲಿ ಆತ್ಮ ವಿಶ್ವಾಸವಿತ್ತು.

"ಅಂತೂ, ನಿಮ್ಮವ್ವನಿಗೊಬ್ಬ ಮನೆಯಲ್ಲಿ ಗಂಡಸು ಅಂತಾದ!" ಎಂದು ಯಾರೋ ಹೇಳಿದರು.

"ಎಲ್ಲರೂ ಬಂದಿರೊ ಹಾಗಿದೆ. ವಾರ್ನರ್ ಅಜ್ಜ?"

"ಇಲ್ಲಿದ್ದೀನಿ ಕಣಪ್ಪ." ಒಂದು ಕ್ಷೀಣ ದನಿ ಕೇಳಿಸಿತು. ಸಮ್ಮರ್ಸ್ ಮತ್ತೊಮ್ಮೆ ಪಟ್ಟಿ ನೋಡಿದ. ಎಲ್ಲೆಡೆ ಮೌನ ನೆಲೆಸಿತು. "ಸರಿ. ನಾನು ನನ್ನ ಪಟ್ಟಿಯಲ್ಲಿರುವ ಕುಟುಂಬಗಳ ಹೆಸರುಗಳನ್ನು